ಎಸ್. ಹೆಚ್. ಡಿ. ಪಿ. ಹಂತ 2ರಲ್ಲಿ ಸಿರುಗುಪ್ಪ ತಾಲ್ಲೂಕಿನಲ್ಲಿರುವ ರಸ್ತೆಯನ್ನು ಕೈಗೆತ್ತಿಕೊಳ್ಳಲಾಗುವುದು

5386 (5451); ಶ್ರೀ ನಾಗರಾಜ್ ಬಿ. ಎಂ. (ಸಿರಗುಪ್ಪ)

ಅ) ಎಸ್.ಹೆಚ್.ಡಿ.ಪಿ. ಹಂತ 2ರಲ್ಲಿ ಸಿರಗುಪ್ಪ ತಾಲ್ಲೂಕಿನಲ್ಲಿ ಯಾವ ರಸ್ತೆಯನ್ನು ಕೈಗೆತ್ತಿಕೊಳ್ಳಲಾಗಿದೆ ಎಷ್ಟು ಕಿ.ಮೀ. ಮತ್ತು ಮಂಜೂರು ಮಾಡಲಾಗಿರುವ ಮೊತ್ತವೆಷ್ಟು;

ಆ) ಸದರಿ ರಸ್ತೆ ಕಾಮಗಾರಿಯನ್ನು ಯಾವ ಗುತ್ತಿಗೆದಾರರಿಗೆ ಟೆಂಡರ್ ಪ್ರಕ್ರಿಯೇ ಅಡಿ ಮಂಜೂರಾಗಿದೆ;

ಇ) ಟೆಂಡರ್ ಅನುಮೋದನೆಯಂತೆ ಗುತ್ತಿಗೆದಾರರಿಗೆ ಎಷ್ಟು ಅವಧಿಯಲ್ಲಿ ಕಾಮಗಾರಿಯನ್ನು ಪೂರೈಸಬೇಕಾಗಿದೆ ಮತ್ತು ಕಾಮಗಾರಿಯ ಗುಣಮಟ್ಟದ ಬಗ್ಗೆ ವಿಧಿಸಿದ ಷರತ್ತುಗಳು ಏನು;

ಈ) ಗುತ್ತಿಗೆದಾರರು ಕಾಮಗಾರಿ ಯಾವಾಗ ಕೈಗೊಂಡಿರುತ್ತಾರೆ, ಇನ್ನು ಎಷ್ಟು ಅವಧಿಯೊಳಗೆ ಪೂರ್ಣಗೊಳಿಸಲಾಗುವುದು;

ಉ) ನಿಗದಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸಲಾಗುವುದೇ; ಕಾಮಗಾರಿ ಗುಣಮಟ್ಟವು ಉತ್ತಮವಾಗಿದೆಯೇ;

ಊ) ಈಗಾಗಲೇ ಕೈಗೊಂಡಿರುವ ಈ ರಸ್ತೆ ಕಾಮಗಾರಿ ಕಳಪೆ ಕಾಮಗಾರಿಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕೈಗೊಂಡ ಕ್ರಮವೇನು?

ಡಾ: ಹೆಚ್. ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಹಂತ–2 ರಲ್ಲಿ ಸಿರಗುಪ್ಪ ತಾಲ್ಲೂಕಿನಲ್ಲಿ ಈ ಕೆಳಕಂಡ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

1. ರಾರಾವಿ–ಬೇಲೂರು ರಾಜ್ಯ ಹೆದ್ದಾರಿ–63 ರಲ್ಲಿ ಸರಪಳಿ 13.00 ಕಿ.ಮೀ ರಿಂದ 15.22 ಕಿ.ಮೀ. ವರೆಗೆ 2.22 ಕಿ.ಮೀ. ಮರುನಿರ್ಮಾಣ ಕಾಮಗಾರಿ.

2. ದೇವದುರ್ಗ–ಬಳ್ಳಾರಿ ರಾಜ್ಯ ಹೆದ್ದಾರಿ–128 ರಲ್ಲಿ ಸರಪಳಿ 117.11 ಕಿ.ಮೀ. ರಿಂದ 180.44 ಕಿ.ಮೀ. ವರೆಗೆ ಒಟ್ಟು 56.22 ಕಿ.ಮೀ. ರಸ್ತೆ ಅಭಿವೃದ್ಧಿ ಕಾಮಗಾರಿ.

ಒಟ್ಟಾರೆಯಾಗಿ ಸಿರಗುಪ್ಪ ತಾಲ್ಲೂಕಿನಲ್ಲಿ 58.44 ಕಿ.ಮೀ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದ್ದು, ಟೆಂಡರ್ ಮೊತ್ತ ರೂ. 3532.30 ಲಕ್ಷಗಳು.

ಆ) ಮೆ॥ ಶ್ರೀ ಶ್ರೀನಿವಾಸ ಕನ್ಸ್‌ಸ್ಟ್ರಕ್ಷನ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಬಳ್ಳಾರಿ, ಎಂಬ ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ವಹಿಸಿಕೊಡಲಾಗಿರುತ್ತದೆ.

ಇ) ಗುತ್ತಿಗೆದಾರರಿಗೆ ಒಟ್ಟು 11 ತಿಂಗಳುಗಳ ಕಾಲಾವಕಾಶವನ್ನು ನೀಡಲಾಗಿದೆ.

ಕಾಮಗಾರಿಯ ಗುಣಮಟ್ಟದ ಬಗ್ಗೆ ಕರಾರು ಪತ್ರದಲ್ಲಿ ಷರತ್ತುಗಳನ್ನು ವಿಧಿಸಲಾಗಿದ್ದು, ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆಂಟ್ಸ್ ಮತ್ತು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಸಂಯುಕ್ತವಾಗಿ ನಿಗಧಿತ ಪರಿಮಾಣಗಳಿಗೆ ತಕ್ಕಂತೆ ಗುಣನಿಯಂತ್ರಣ ಪರೀಕ್ಷೆಗಳನ್ನು ನಿರ್ವಹಿಸುತ್ತಾರೆ.

ಈ) ಗುತ್ತಿಗೆದಾರರು ದಿನಾಂಕ: 28.12.2013 ರಂದು ಕಾಮಗಾರಿಯನ್ನು ಪ್ರಾರಂಭಿಸಿ ದಿನಾಂಕ: 27.11.2014ರ ಒಳಗೆ ಪೂರ್ಣಗೊಳಿಸಬೇಕಾಗಿತ್ತು. ಆದರೆ Scope of work. ಬದಲಾವಣೆಯಾಗಿರುವುದರಿಂದ, ಜಿಲ್ಲಾಡಳಿತದಿಂದ ಕಲ್ಲುಗಣಿಗಾರಿಕೆಗೆ ಅನುಮತಿ ನೀಡಲು ವಿಳಂಬವಾಗಿದ್ದರಿಂದ ಹಾಗೂ ಈ ಭಾಗದಲ್ಲಿ ಬಿದ್ದ ಅಕಾಲಿಕ ಮಳೆಯಿಂದಾಗಿ

ಕಾಮಗಾರಿಯ ಪ್ರಗತಿಯಲ್ಲಿ ಕುಂಠಿತವಾಗಿರುತ್ತದೆ. ಈ ಕಾರಣಗಳಿಂದ ಕಾಮಗಾರಿಯನ್ನು ಪೂರ್ಣಗೊಳಿಸಲು ವಿಳಂಬವಾಗಿದ್ದು, ಜನವರಿ 2016 ರೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಯೋಜಿಸಲಾಗಿದೆ.

ಉ) ಜನವರಿ 2016 ರೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಯೋಜಿಸಲಾಗಿದೆ.

ಸದರಿ ಕಾಮಗಾರಿಯ ಗುಣಮಟ್ಟವು ತೃಪ್ತಿಕರವಾಗಿರುತ್ತದೆ.

ಊ) ಈ ಕಾಮಗಾರಿಗೆ ನಿಯೋಜಿಸಿರುವ ಪಿಎಂಸಿ ಹಾಗೂ ಲೋಕೋಪಯೋಗಿ ಇಲಾಖೆ ಇಂಜಿನಿಯರ್‌ಗಳು ಪ್ರತಿ ಹಂತದಲ್ಲೂ ನಿಗದಿತ ಪರಿಣಾಮಗಳಿಗೆ ತಕ್ಕಂತೆ ಗುಣನಿಯಂತ್ರಣ ಪರೀಕ್ಷೆಗಳನ್ನು ನಿರ್ವಹಿಸಿರುತ್ತಾರೆ ಹಾಗೂ ಕಾಲಕಾಲಕ್ಕೆ ಎಸ್‌ಹೆಚ್‌ಡಿಪಿಯ ಇಂಜಿನಿಯರ್‌ಗಳು ಸಹ ಪರಿವೀಕ್ಷಣೆ ಮಾಡಿದ್ದು ಕಾಮಗಾರಿಯು ಕಳಪೆಯಾಗಿಲ್ಲದಿರುವುದು ಕಂಡುಬಂದಿದೆ.

ನಿರಂತರ ಜ್ಯೋತಿ ಮಂಜೂರಾತಿ

5387 (5452); ಶ್ರೀ ನಾಗರಾಜ್ ಬಿ. ಎಂ. (ಸಿರಗುಪ್ಪ)

ಅ) ಬಳ್ಳಾರಿ ಜಿಲ್ಲೆ ಸಿರಗುಪ್ಪ ತಾಲ್ಲೂಕಿಗೆ ನಿರಂತರ ಜ್ಯೋತಿ ಯಾವ ವರ್ಷದಲ್ಲಿ ಮಂಜೂರಾಗಿದೆ;

ಆ) ಸದರಿ ಯೋಜನೆ ಅಡಿ ಕೈಗೊಳ್ಳಬೇಕಾದ ಕಾಮಗಾರಿಗಳು ಮತ್ತು ಅದಕ್ಕಾಗಿ ಸರ್ಕಾರವು ಮಂಜೂರು ಮಾಡಿರುವ ಅನುದಾನವೆಷ್ಟು; (ವಿವರ ನೀಡುವುದು);

ಇ) ಸದರಿ ಯೋಜನೆಯು ಈಗ ಯಾವ ಹಂತದಲ್ಲಿದೆ ಮತ್ತು ನಿಯಮದಂತೆ ಎಷ್ಟು ಅವಧಿಯೊಳಗೆ ಪೂರ್ಣಗೊಳಿಸಬೇಕಾಗಿರುತ್ತದೆ;